ಪ್ರಜಾವಾಣಿ

## ಬ್ಯಾಸ್ಕೆಟ್‌ಬಾಲ್: ಜೈನ್ ವಿ.ವಿ.ಗೆ ಜಯ

ಬೆಂಗಳೂರು: ಕೈಫ್ ಜಿಯಾ (39 ಪಾಯಿಂಟ್) ಅವರ ಉತ್ತಮ ಆಟದ ನೆರವಿನಿಂದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡ ಚೆನ್ನೈನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿ.ವಿ. ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಮತ್ತೊಂದು ಗೆಲುವು ಪಡೆಯಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಜೈನ್ ವಿ.ವಿ. 96–67 ರಲ್ಲಿ ಜೈಪುರದ ರಾಜಸ್ತಾನ ವಿ.ವಿ. ತಂಡವನ್ನು ಮಣಿಸಿತು. ಯಶಸ್ ರಮೇಶ್ (18) ಮತ್ತು ವಿಸು ಪಳನಿ (10) ಅವರು ಕೈಫ್‌ಗೆ ತಕ್ಕ ಬೆಂಬಲ ನೀಡಿದರು.

ಮೂರು ಕ್ವಾರ್ಟರ್‌ಗಳ ಅಂತ್ಯದವರೆಗೆ ರಾಜಸ್ತಾನ ತಂಡ ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾಯಿತು. ಆದರೆ ಅಂತಿಮ ಕ್ವಾರ್ಟರ್‌ನಲ್ಲಿ (28–9) ಕೈಫ್ ಮೇಲಿಂದ ಮೇಲೆ ಪಾಯಿಂಟ್ ಕಲೆಹಾಕಿ ಜೈನ್ ತಂಡದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು.